ರಾಕೇಶ ಪಕ್ಕದೂರಿಗೆ ಹೋಗಿ ಪಶುವೈದ್ಯರನ್ನು ಕರೆತಂದ. ಪರಿಶೀಲಿಸಿದ ಅವರು ಬೆಳಗ್ಗಿನಿಂದ ಕೆಸರಿನಲ್ಲಿ ಮುಳುಗಿಕೊಂಡೇ ಇದ್ದುದರಿಂದ ಅದರ ಸೊಂಟದ ಮೂಳೆಗೆ ಘಾಸಿಯಾಗಿದೆ. ಒಂದು ಕ್ಯಾಲ್ಸಿಯಂ ಇಂಜೆಕ್ಷನ್ ಕೊಟ್ಟಿರುತ್ತೇನೆ. ಯಾರಾದ್ರೂ ಕೆಲವರು ಇದರ ಹತ್ತಿರವೇ ಇರಿ. ಏಳಕೆ ಮಿಸುಕಾಡಿದ್ರೆ ನೀವೂ ಕೈಕೊಟ್ಟು ಏಳ್ಸಕೆ ಸಹಾಯ ಮಾಡಿ.ಏನೋ ನಿಮ್ಮ ಅದೃಷ್ಟ. ಏನಾಯ್ತು ಅಂತ ಬೆಳಿಗ್ಗೆ ನನಗೆ ಫೋನ್ ಮಾಡಿ ತಿಳಿಸಿ... ಅವಶ್ಯಕತೆ ಇದ್ದರೆ ಬಂದು ಹೋಗ್ತಿನಿ' ಎಂದವನು ಜನರ ಕಡೆಗೆ ತಿರುಗಿ, 'ನಾವು ಎಂತೆಂತವರನ್ನು ಓಟ್ಹಾಕಿ ಗೆಲ್ಸಿ ಸರ್ಕಾರ ಮಾಡಕೆ ಬಿಟ್ಟಂಡಿದೀವಿ ನೋಡಿ... ಜನರ ಬದುಕನ್ನು ಹಸನು ಮಾಡಬೇಕಾದ ಈ ಸರ್ಕಾರದವ್ರು ತಮ್ಮ ಸ್ವಾರ್ಥ ನೋಡ್ಕಂಡು ರೈತಾಪಿ ಜನರನ್ನು ಈ ರೀತಿ ಹೊಂಡಕ್ಕೆ ಕೆಡಗ್ತಾರೆ ನೋಡಿ. ಇನ್ನೂ ಏನೇನು ಕಷ್ಟ ನೋಡ್ಬೇಕೋ... ಅತ್ಲಾಗಿ ಈ ಹೊಂಡ ಮುಚ್ಚಿ ಹಾಕಿಸಿಬಿಡಿ' ಎಂದು ರಾಕೇಶನಿಗೆ ಹೇಳಿದ.



ನಾನಾಗ್ಲೆ ಜೆಸಿಬಿಗೆ ಹೇಳಿದ್ದೀನಿ ಬೆಳಿಗ್ಗೆ ಬಂದು ಮುಚ್ಹಾಕುತ್ತೆ ಎಂದ.

'ಈ ಹೊಂಡ ಮುಚ್ಚಕೆ ಈ ಮಣ್ಣು ಎಲ್ಲಿ ಸಾಲುತ್ತಾ ಮಗ... ಮೊದ್ಲೆ ಹೇಳದಿಲ್ವ ಗುಂಡಿ ಮಣ್ಣು ಗುಂಡಿಗೆ ಸಾಲದಿಲ್ಲ ಅಂತವಾ. ಅದರಲ್ಲೂ ಆಗ್ಲೇ ಒಂದಿಷ್ಟು ಮಣ್ಣು ಕಿತ್ತಾರ್ ಕಡೆ ಕೊರಕ್ಲಿಗೆ ತುಂಬಿಸ್ಗಂಡಿದೀರಿ... ಒಂದ್ ಇಪ್ಪತ್ ಇಪ್ಪತ್ತೈದು ಟ್ರಾಕ್ಟರ್ ಮಣ್ಣ ಕೆರೆ ಹಡ್ಲಿಂದ ತಂದ್ ತುಂಬ್ಸಿ' ಎಂದು ಪಟೇಲಪ್ಪ ತನ್ನ ಅನುಭವದ ಮಾತು ಹೇಳಿದ.

* * *

ಬೆಳಕು ಹರಿದು ಬಿಸಿಲು ಚುರುಕಾದ್ರು ಹಸು ಮಿಸುಕಾಡುವ ಲಕ್ಷಣ ಕಾಣಲಿಲ್ಲ. ಪಶು ವೈದ್ಯ ಬಂದು ನೋಡಿ ಎಂತ ಸ್ಟ್ರಾಗ್ ಇಂಜೆಕ್ಷನ್ ಕೊಟ್ರೂ ಅದೇನು ಉಪಯೋಗ ಆದಂಗೆ ಕಾಣ್ತಾ ಎಲ್ಲ... ಈಗೊಂದು ಇಂಜೆಕ್ಷನ್ ಕೊಟ್ಟಿರ್ತೀನಿ... ಅದರ ಮೇಲೆ ನಿಮ್ಮ ಹಣೆಬರಹ ಎಂದ. ಜೆಸಿಬಿ ಬಂದು ಹೊಯ್ಗೆ ಮಣ್ಣನ್ನು ಎಳೆದು ಹೊಂಡಕ್ಕೆ ತುಂಬುತ್ತಿತ್ತು. ಸಾವಕಾಶವಾಗಿ ಬಂದ ಎರಡು ಟ್ರಾಕ್ಟರುಗಳು ಜೆಸಿಬಿಗಾಗಿ ಕೆರೆ ಹಡ್ಲ ಬಳಿ ಕಾಯುತ್ತಾ ನಿಂತಿದ್ದವು.

ಗುಜರಿ ಸಾಬಿಯ ಲಗ್ಗೇಜ್ ಆಟೋ ಬಂದು ಗಿರ್ಲು ಹಿಡಿದಿದ್ದ ಮೋಟಾರನ್ನು ತುಂಬಿಕೊಂಡು ಹೋಯಿತು. ದೈನ್ಯತೆಯೇ ಮೂರ್ತಿವೆತ್ತಂತೆ ಕುಳಿತಿದ್ದ ಹೊನ್ನಮ್ಮನ ಬಳಿ ಬಂದ ರಾಕೇಶ 'ಎಲ್ಲಾ ಆಗದು ಆಗಿ ಹೋಯ್ತು.. ಸಮಾಧಾನ ಮಾಡ್ಕ. ನಾನು ಬ್ಯಾಂಕಿಗೆ ಹೋಗಿ ಅಕೌಂಟಲಿ ಉಳ್ದಿರ ದುಡ್ಡೆಲ್ಲಾ ಬಳ್ಕಂದ್ ಬತ್ತೀನಿ. ಈ ಜೆಸಿಬಿ ಟ್ರಾಕ್ಟರು ಇವ್ಕೆಲ್ಲಾ ಕೊಡ್ಬೇಕಲ್ಲ' ಎನ್ನುತ್ತಾ ಮೊಪೆಡ್ ಹತ್ತಿದ.

ಅಲ್ಲಿ ಬಂದಿದ್ದವರೆಲ್ಲಾ ಹಸುವಿನ ಬಗ್ಗೆ ಭರವಸೆ ಕಳೆದುಕೊಂಡಿದ್ದರು.

'ಅದೇನ್ ಎಲ್ಲಾ ಹಂಗ್ ನೋಡ್ತಾ ನಿಂತ್ಗಂಡ್ರಿ ನಿನ್ನೆಯಿಂದ ಹಸ ಒಂದೇ ಮಗ್ಲಲಿ ಮಲಗಿತೆ. ಕಾವ್ ಬಂದು ಚರ್ಮ ಗಿರ್ಮ ಕಿತ್ಹೋದತು.. ಎಲ್ಲಿ, ಎಲ್ಲಾ ಕೈ ಹಾಕಿ, ಮಗ್ಗಲು ಬದಲಾಯ್ಸಣ' ಎಂದ ಪಟೇಲಪ್ಪ.

ಎಲ್ಲರೂ ಕೈ ಹಾಕಿ ಹೊರಳಿಸಿದರು. ಅದರ ನಾಲ್ಕು ಕಾಲುಗಳೂ ಕ್ಷಣ ಆಕಾಶ ನೋಡಿದಂತೆ ಆಗಿ ಹಸು ಇನ್ನೊಂದು ಮಗ್ಗುಲಿಗೆ ಮಗುಚಿಕೊಂಡಿತು.

ಅದರ ದೇಹ ಕ್ಷಣ ಕುಲುಕಾಡಿ ಸ್ಥಗಿತವಾಯಿತು. ಅದರ ತುಂಬಿದ ಕೆಚ್ಚಲಿನಿಂದ ಹಳದಿ ಬಣ್ಣದ ಜೀಬ್ಹಾಲು ತುಳುಕಿ ಬದುವನ್ನು ನೆನಸಿತು. ಅದರ ಬದಿಯಲ್ಲೇ ಕುಳಿತಿದ್ದ ಹೊನ್ನಮ್ಮನ ಕರಳು ಕಿವುಚಿದಂತಾಯಿತು. ಅವಳ ಕಣ್ಣಲ್ಲಿ ತುಳುಕಿದ ನೀರು ಆ ಜೀಬ್ಹಾಲಿನ ಮೇಲೆ ಬಿದ್ದು ಬದುವಿನಲ್ಲಿ ಇಂಗಿ ಹೋಗತೊಡಗಿದವು. ರಾತ್ರಿಯೆಲ್ಲಾ ಚಳಿ ಜ್ವರದಿಂದ ಭಾದಿತನಾಗಿದ್ದ ಹೆಡ್ಡಪ್ಪ, ಕುಕ್ಕುರುಗಾಲಲ್ಲಿ, ಮಂಡಿಯ ಮೇಲೆ ಗಲ್ಲ ಊರಿ, ನಾಡಿನೆಲ್ಲಾ ರೈತರ ಪ್ರತೀಕದಂತೆ ನಡುಗುತ್ತಾ ಕುಳಿತಿದ್ದ. ●